

ಆತನಿಂದ ವಿಚ್ಛೇದನ ಪಡೆದಳು. ಮಗುವಿನ ಸಂಪೂರ್ಣ ಜವಾಬ್ದಾರಿಯನ್ನು ಅಮ್ಮನಿಗೆ ವಹಿಸಲಾಯಿತು. ಕೆಲವು ವರ್ಷಗಳ ನಂತರ ಆಕೆ ಮತ್ತೊಬ್ಬರನ್ನು ಮದುವೆಯಾದಳು. ಜೀವನವನ್ನು ಅರ್ಥಮಾಡಿಕೊಳ್ಳಬಲ್ಲ ಸಂಗಾತಿ ದೊರೆತುದರಿಂದ, ಮೂವರ ಜೀವನವೂ ಸುಂದರವಾಗಿಯೇ ಸಾಗುತ್ತಿತ್ತು. ಆದರೆ ಮೊದಲನೆಯ ಗಂಡನಿಗೆ ಸಂಸಾರ ನಡೆಸುವುದು ಸಾಧ್ಯವಾಗದೇ ಇದ್ದರೂ, ಅಹಂಗೆ ಪೆಟ್ಟು ಬಿದ್ದ ಗಾಯ ಹಾಗೆಯೇ ಉಳಿದಿತ್ತು. ಶಾಲೆಗೆ ಹೋಗಲು ಆರಂಭಿಸಿದ್ದ ಮಗಳನ್ನು ಪದೇ ಪದೇ ಭೇಟಿಯಾದ ಆತ, ಅವಳ ಮೂಲಕ ಒಂದು ಕೇಸು ಹಾಕಿಸಿದ. ಅವಳ ಮಲತಂದೆಯ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸುವಲ್ಲಿ ಯಶಸ್ವಿಯಾದ. ಅದರೊಂದಿಗೆ ಇಡೀ ಕುಟುಂಬದ ನೆಮ್ಮದಿ ಹಾಳಾಯಿತು.

ಭದ್ರತೆಗಾಗಿ ರೂಪುಗೊಂಡ ಕಾನೂನುಗಳ ಉದ್ದೇಶವೇನು ಎಂಬ ಅರಿವು ಮಹಿಳೆಯರಲ್ಲಿ ಮಾತ್ರವಲ್ಲ, ಪುರುಷರಲ್ಲಿಯೂ ಇರುವುದೂ ಅಷ್ಟೇ ಮುಖ್ಯ. ಇಂತಹ ಘಟನೆಗಳಾದಾಗ ಮಹಿಳೆಯರ ಕಾನೂನುಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತದೆ ಎಂಬ ಆರೋಪವೇ ಮುನ್ನೆಲೆಗೆ ಬರುತ್ತದೆ. ಘಟನೆಯ ಹಿಂದಿರುವ ಪರಿಸ್ಥಿತಿಗಳಲ್ಲಿ ಸೂತ್ರವನ್ನು ಯಾರು ಹಿಡಿದಿದ್ದಾರೆ ಎಂಬ ವಿಚಾರ ವಿಮರ್ಶೆಗಳು ನಡೆಯುವುದಿಲ್ಲ.

ಮಹಿಳಾ ಮತ್ತು ಮಕ್ಕಳ ಹಕ್ಕುಗಳ ಹೋರಾಟಗಾರರೂ ವಕೀಲರೂ ಆಗಿರುವ ಅಂಜಲಿ ರಾಮಣ್ಣ, 'ಅರಣ್ಯ ಕಾಯಿದೆ, ನೀರು, ಗಾಳಿಗೆ ಸಂಬಂಧಿಸಿದ ಕಾಯಿದೆಯಿಂದ ಹಿಡಿದು, ಎಲ್ಲಾ ಕಾಯಿದೆಗಳೂ ಒಂದಲ್ಲ ಒಂದು ಕಡೆಯಲ್ಲಿ, ಒಂದಲ್ಲ ಒಂದು ವಿಧಾನದಲ್ಲಿ ದುರ್ಬಳಕೆ ಆಗುತ್ತಲೇ ಇರುತ್ತವೆ. ಅದೇ ಮಾದರಿಯಲ್ಲಿ ಮಹಿಳಾಪರ ಕಾನೂನುಗಳೂ ದುರ್ಬಳಕೆ ಆಗುತ್ತಿವೆ. ಆದರೆ, ಮಹಿಳೆಯರ ವಿಚಾರ ಬಂದಾಗ, ಆ ಕುರಿತು ಸಮಾಜದ ಪ್ರತಿಕ್ರಿಯೆ ಒಂದು ತೂಕ ಹೆಚ್ಚಾಗಿಯೇ ಇರುತ್ತದೆ. ಯಾವುದೇ ಕಾನೂನಿನ ದುರ್ಬಳಕೆಯೇ ಆಗಿರಲಿ, ಅದು ತಪ್ಪೇ. ಅದನ್ನು ಖಂಡಿಸಲೇಬೇಕು' ಎನ್ನುತ್ತಾರೆ.

ಬರಹಗಾರ್ತಿ, ರಾಜಕೀಯ ವಿಶ್ಲೇಷಕಿ, ಪ್ರೀತಿ ನಾಗರಾಜ ಸಿ.ಡಿ. ಪ್ರಕರಣವನ್ನು 'ಮಹಿಳಾ' ಎಂಬ ಶೀರ್ಷಿಕೆಯಡಿ ನೋಡುವುದು ಸರಿಯಲ್ಲ ಎನ್ನುತ್ತಾರೆ. 'ಹಿಂದುಳಿದ ವರ್ಗದಿಂದ ಬಂದಿರುವ ಒಬ್ಬ ವ್ಯಕ್ತಿ ಎಷ್ಟೋ ಎಡರುತೊಡರುಗಳನ್ನು ದಾಟಿ ಬಂದು, ಒಬ್ಬ ನಾಯಕನಾಗಿ ಗುರುತಿಸಿಕೊಂಡಿರುತ್ತಾನೆ. ರಾಜಕೀಯ ಒಳಸುಳಿಗಳನ್ನು ದಾಟಿಕೊಂಡು ಬಂದಿರುವ ವ್ಯಕ್ತಿಗೆ ಇದೇ ರಾಜಕೀಯ ಕ್ಷೇತ್ರದಲ್ಲಿ ಎದುರಾಗಬಹುದಾದ ಇಂತಹ ವಿಚಾರಗಳ ಬಗ್ಗೆಯೂ ಎಚ್ಚರಿಕೆ ಇರಬೇಕಲ್ಲವೇ? ನನ್ನ ಆರೋಗ್ಯ ರಕ್ಷಣೆಯನ್ನು